ವಿಷಯ(vii): ಕೊಬ್ಬರಿ ಬೆಲೆ ಕುಸಿದಿರುವುದು

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ): ಅಧ್ಯಕ್ಷರೇ, ಕಳೆದ ಎರಡು ತಿಂಗಳಿಂದ ಕೊಬ್ಬರಿ ರೇಟ್ ಡೌನಾಗಿದ್ದುದರಿಂದ ನ್ಯಾಫೆಡ್‌ನವರು 3500 ರೂಪಾಯಿ ರೇಟ್‌ನಲ್ಲಿ ಕೊಂಡುಕೊಳ್ಳುತ್ತಿದ್ದರು. 15-20 ದಿವಸದಿಂದ ನಿಲ್ಲಿಸಿಬಿಟ್ಟಿದ್ದಾರೆ. ಕೊಬ್ಬರಿ ಮಾರಾಟ ಮಾಡುವ ರೈತರು ಬಹಳ ಇದ್ದಾರೆ, ರೇಟು ಬಹಳ ಡೌನಾಗಿದೆ. ಬಹಳ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಒಂದು ಕಡೆ ನುಸಿರೋಗ ಬಿದ್ದು ಬೆಳೆ ಹಾಳಾಗಿ ಉತ್ಪನ್ನ ಅತ್ಯಲ್ಪ ಬರುತ್ತಿದೆ. ಹಾಗೆ ಬಂದಿರುವುದಕ್ಕೂ ನ್ಯಾಯವಾದ ರೇಟ್ ಸಿಕ್ಕದೇ ಹೋದರೆ ರೈತರು ಸರ್ವನಾಶವಾಗುತ್ತಾರೆ. ಇದರ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ತುರುವೇಕೆರೆ): ಈಗಾಗಲೇ ಅನೇಕ ಸಲ ಕೊಬ್ಬರಿ ಬಗ್ಗೆ ಪ್ರಸ್ತಾಪವಾಗಿದೆ. ನ್ಯಾಫೆಡ್ ಮೂಲಕ ಖರೀದಿ ಮಾಡುತ್ತಿದ್ದಾಗ ಅದು ಈ ತಿಂಗಳು 2ನೇ ತಾರೀಖಿನವರೆಗೂ ಕೊಂಡರು, ತುರುವೇಕೆರೆ, ಅರಸೀಕೆರೆ, ಮತ್ತು ತಿಪಟೂರಿನ ಮೇನ್ ಮಾರ್ಕೆಟ್‌ಗಳಲ್ಲಿ. ಆದರೆ ಡಿಸೆಂಬರ್‌ನಲ್ಲಿ ಕೊಂಡಿರುವ ಕೊಬ್ಬರಿಗೆ ಇನ್ನೂ ಹಣ ಕೊಟ್ಟಿಲ್ಲ. ಚೆಕ್ ಕೊಟ್ಟಿದ್ದಾರೆ, ಅವೆಲ್ಲ ಬೌನ್ಸ್ ಆಗುತ್ತಿವೆ. ಆ ದೃಷ್ಟಿಯಿಂದ ನ್ಯಾಫೆಡ್, ಸಹಕಾರ ಸಂಘ ವೇರ್‌ಹೌಸ್ ಮತ್ತು ಫೆಡರೇಶನ್ - ಸರ್ಕಾರದ ಈ ನಾಲ್ಕು ಸಂಸ್ಥೆಗಳೂ ಸೇರಿ ಕೆಲಸ ಮಾಡಬೇಕಾಗುತ್ತದೆ. ಅಲ್ಲೇನಾಗಿದೆ ಅಂದರೆ ವೇರ್‌ಹೌಸ್‌ಗಳಿಲ್ಲವೆನ್ನುತ್ತಿದ್ದಾರೆ. ಆದರೆ ಇತ್ತೀಚೆಗೆ ಕೆಲವು ಟಿಎಪಿಸಿಎಂಎಸ್ ಗೋಡೌನ್‌ಗಳಿವೆ ಮತ್ತು ಸ್ಥಳೀಯ ಗುರುಭವನಗಳನ್ನು ತೆಗೆದುಕೊಂಡು ಮಾರಿಕೊಡಿ ಎಂದು ಹೇಳಿದರೂ ಯಾವುದೇ ಕೆಲಸ ಆಗುತ್ತಿಲ್ಲ. 50 ರಿಂದ 60 ಸಾವಿರ ಚೀಲ ಕೊಬ್ಬರಿ ಬಂದು ವಾಪಸ್ ಹೋಗುತ್ತಿದೆ. ರೈತರೆಲ್ಲ ಕಂಗಾಲಾಗಿದ್ದಾರೆ. ಮೊನ್ನೆ ಮುಖ್ಯಮಂತ್ರಿಗಳು ಆವರ್ತ ನಿಧಿಯನ್ನು 100 ಕೋಟಿಯಿಂದ 200 ಕೋಟಿಗೆ ಏರಿಸಲಾಗಿದೆ ಎಂದರು. ಆ ಹಣವನ್ನು ಶೀಘ್ರವೇ ರಿಲೀಸ್ ಮಾಡಿ ಬರುವ ಹಣವನ್ನು ತೆಗೆದುಕೊಂಡು ದಯವಿಟ್ಟು ರೈತರನ್ನು ಉಳಿಸಬೇಕೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ವೇರ್‌ಹೌಸ್‌ಗೆ ಏನು ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ, ಅದರ ಬಗ್ಗೆಯೂ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಹನುಮೇಗೌಡರು, ಲಕ್ಷ್ಮಿನಾರಾಯಣ್‌ರವರು ಕೊಬ್ಬರಿಯನ್ನು ಕೊಳ್ಳುವುದರಲ್ಲಿ ವಿಳಂಬವಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ, ಅದನ್ನು ನಾನು ಕೂಡ ಒಪ್ಪುವುದಕ್ಕೆ ತಯಾರಾಗಿದ್ದೇನೆ. ಈಗಾಗಲೇ ನಾವು 3500 ರೂಪಾಯಿಗಳಂತೆ ಕೊಳ್ಳಬೇಕಾಗಿದ್ದರೂ ಕೂಡ ಇವತ್ತು ಮಾರುಕಟ್ಟೆಯಲ್ಲಿ ಬೆಲೆ 2500 ರಿಂದ 2700 ರೂಪಾಯಿ ಇದೆ. ಇದರ ಸಂಪೂರ್ಣ ಜವಾಬ್ದಾರಿಕೆ ನ್ಯಾಫೆಡ್‌ರವರದು. ಇದನ್ನು ನ್ಯಫೆಡ್‌ನವರು ಕೊಡುತ್ತಾರೆ. ಇಲ್ಲಿಯವರೆಗೂ ಕೂಡ ನಫೆಡ್‌ನವರನ್ನು ಬಿಟ್ಟರೆ ಯಾರೂ ಕೂಡ ಪ್ರೊಕ್ಯೂರ್‌ಮೆಂಟನ್ನು ಮಾಡಿಲ್ಲ. ನಫೆಡ್‌ನವರು ಈಗಾಗಲೇ ಇಲ್ಲಿಯವರೆಗೆ ಸುಮಾರು 47,500 ಕ್ವಿಂಟಾಲ್‌ನಷ್ಟು ಪ್ರೊಕ್ಯೂರ್‌ಮೆಂಟನ್ನು ಮಾಡಿದ್ದಾರೆ ಮತ್ತು ಮಾರುತ್ತಿದ್ದಾರೆ. ನಫೆಡ್‌ನವರೇ ಪರ್ಚೇಸ್ ಮಾಡಿರುವುದು. ಸುಮಾರು 18 ಕೋಟಿ ರೂಪಾಯಿಗಳಷ್ಟು ಬಾಕಿ ಇತ್ತು. ಈಗಾಗಲೇ ಬಾಕಿಗಳೆಲ್ಲಾ ಕಡಿಮೆಯಾಗಿ ಸುಮಾರು

ಒಂಭತ್ತು ಕೋಟಿ ರೂಪಾಯಿಗಳಷ್ಟು ಇನ್ನೂ ಕೂಡ ಕೊಡಬೇಕಾಗಿದೆ. ಈಗ ನಫೆಡ್‌ನವರನ್ನು ಕೇಳಿದರೆ ನಾವು ಬಿಡುಗಡೆ ಮಾಡಿದ್ದೇವೆ. ಇನ್ನು ನಾವು ಕೊಡಬೇಕಾಗಿರುವುದು ಮೂರು ಕೋಟಿ ರೂಪಾಯಿಗಳು ಎಂದು ಅವರು ಹೇಳುತ್ತಾರೆ. ಫೆಡರೇಷನ್‌ನಿಂದ ಒಂಭತ್ತು ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ನಮಗೆ ಇನ್ನೂ ಕೂಡ ಹಣ ಸಂದಾಯವಾಗಿಲ್ಲ. ಆ ಕಾರಣದಿಂದಾಗಿ ರೈತರಿಗೆ ಚೆಕ್ ಕೊಡುವಲ್ಲಿ ವಿಳಂಬವಾಗುತ್ತಿರುವುದು ನಿಜ. ಈಗಾಗಲೇ ಮೊನ್ನೆ ಎಲ್ಲಾ ಕೊಬ್ಬರಿ ಬೆಳೆಯುವ ಶಾಸಕರ ಸಭೆಯನ್ನು ತೋಟಗಾರಿಕೆ ಸಚಿವರು ಕೂಡ ನಡೆಸಿ ನಫೆಡ್ ಮೇಲೆ ಒತ್ತಾಯ ತರುವ ಕೆಲಸವನ್ನು ಮಾಡಿದ್ದಾರೆ. ಈಗ ನಫೆಡ್‌ನವರು ಒಂದು ರೀತಿ ಹೇಳುತ್ತಾರೆ. ಮಾರ್ಕೆಟಿಂಗ್ ಫೆಡರೇಷನ್‌ನವರು ಒಂದು ರೀತಿ ಹೇಳುತ್ತಾರೆ. ಆ ಹಿನ್ನೆಲೆಯಲ್ಲಿ ಸಾಕಷ್ಟು ಹಣ ನಫೆಡ್‌ನಿಂದ ಬಿಡುಗಡೆಯಾಗಬೇಕಾಗಿರುವುದರಿಂದ ನಾಳೆ ಮತ್ತೊಮ್ಮೆ ನಮ್ಮೆಲ್ಲಾ ಶಾಸಕರ ಜೊತೆ, ನಫೆಡ್‌ರವರ ಜೊತೆ, ಮಾರ್ಕೆಟಿಂಗ್ ಫೆಡರೇಷನ್‌ನವರ ಜೊತೆ ಸಭೆಯನ್ನು ಕರೆದು ಇದನ್ನು ಅಂತಿಮಗೊಳಿಸತಕ್ಕ ಕೆಲಸವನ್ನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ನಫೆಡ್‌ನವರು ಕೊಂಡು ಕೊಳ್ಳುವುದನ್ನು ನಿಲ್ಲಿಸಿಬಿಟ್ಟರೆ, ನಿಧಾನ ಮಾಡಿದರೆ ತೊಂದರೆಯಾಗುತ್ತದೆ. ರಾಜ್ಯ ಸರ್ಕಾರದಿಂದ ಆವೃತ್ತ ನಿಧಿ ಎಂದು ಹೇಳಿ 75-100 ಎಂದು ಹೇಳಿ ಏನೋ ಲೆಕ್ಕ ಹೇಳುತ್ತಿದ್ದೀರಲ್ಲ, ಅದರಲ್ಲಿ ಸ್ವಲ್ಪ ಭಾಗ ಹಣವನ್ನು ಕೊಟ್ಟುಕೊಂಡು ನಫೆಡ್‌ನವರಿಗೆ ಕೊಡುವುದಕ್ಕೆ ಸಾಧ್ಯವೇ? ಅದರ ಬಗ್ಗೆ ಆಲೋಚನೆ ಮಾಡುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ಕೊಬ್ಬರಿಯನ್ನು ಬೆಳೆಯುವುದು ಕೇರಳ ರಾಜ್ಯ ಮತ್ತು ಕರ್ನಾಟಕ. ಕೇರಳ ರಾಜ್ಯದಲ್ಲಿ ಸುಮಾರು 700 ಕೋಟಿ ರೂಪಾಯಿಗಳಿಗೂ ಹೆಚ್ಚು ಕೊಬ್ಬರಿಯನ್ನು ಕೊಳ್ಳತಕ್ಕ ಕೆಲಸವನ್ನು ನಫೆಡ್‌ನವರು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಕೊಂಡಿರುವುದು 18 ಕೋಟಿ ರೂಪಾಯಿಗಳಷ್ಟು ಮಾತ್ರ. ನಾನು ಮೊನ್ನೆ ದೆಹಲಿಗೆ ಹೋದಂಥ ಸಂದರ್ಭದಲ್ಲಿ ಕೃಷಿ ಸಚಿವರನ್ನು ಭೇಟಿ ಮಾಡಿ ಹಣವನ್ನು ಬೇಗ ಬಿಡುಗಡೆ ಮಾಡಬೇಕೆಂದು ಹೇಳಿ ಅವರ ಕಡೆಯಿಂದ ಫೋನ್ ಮಾಡಿಸಿ ಬಂದಿದ್ದೇನೆ. ಹಣ ಏನೋ ಬಂದಿದೆ ಎಂದು ಹೇಳುತ್ತಾರೆ, ಅದೇನೋ ಗೊತ್ತಿಲ್ಲ. ತಾವು ಹೇಳಿದಂತೆ ಆವರ್ತ ನಿಧಿಯಿಂದ ಎಂದೂ ಕೂಡ ಕೊಡುವ ಬಗ್ಗೆ ಚಿಂತನೆಯನ್ನು ಮಾಡಿಲ್ಲ. ಕಾರಣವೇನೆಂದರೆ ನಫೆಡ್‌ನವರೇ ಕೊಡುತ್ತಾರೆನ್ನುವ ಆಶ್ವಾಸನೆಯಿಂದ ಇದ್ದೇವೆ. ಈಗಾಗಲೇ ಒಂದು ಕ್ಯಾಬಿನೆಟ್‌ನ ಸಬ್ ಕಮಿಟಿಯಾಗಿರುವುದರಿಂದ ಆ ಸಬ್‌ಕಮಿಟಿಯಲ್ಲಿ ನಫೆಡ್‌ನವರನ್ನು ಕರೆದು ಚರ್ಚೆ ಮಾಡಿ ಅಂತಿಮವಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ್: ಮಾನ್ಯ ಅಧ್ಯಕ್ಷರೇ, ಕೊಬ್ಬರಿ ಡ್ರೈ ಆಗಿರುವ ಸಂದರ್ಭದಲ್ಲಿ ಅದು ಬಿಸಿಲಿಗೆ ತಡೆಯುವುದಿಲ್ಲ. ಎಣ್ಣೆಗರಿದು ಪೂರ್ತಿ ಹಾಳಾಗತಕ್ಕ ಪರಿಸ್ಥಿತಿ ಇದೆ. ಮತ್ತೆ ಹಿಂದೆ ಸರ್ಕಾರ ಬಂದು ಮಾತನ್ನು ಕೂಡ ಹೇಳಿತ್ತು. ರೈತ ಬೆಳೆದ ಪದಾರ್ಥ ಧಾರಣೆ ಕಡಿಮೆಯಾದ ಸಂದರ್ಭದಲ್ಲಿ ಮಾರುಕಟ್ಟೆಗಳಿಗೆ ಬಂದಾಗ ಅದನ್ನು ಎಪಿಎಂಸಿಗಳು

ಕೂಡ ಸಂಗ್ರಹಣೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ರೀತಿಯ ಕೆಲಸ ಎಲ್ಲೂ ಕೂಡ ಆಗಿಲ್ಲ. ನಾಳೆಯಿಂದ ಖರೀದಿ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ಮಾತನ್ನು ನಾನು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಖರೀದಿ ಎನ್ನುವುದು ಅಧಿಕೃತವಾಗಿ ಎಲ್ಲೂ ಕೂಡ ನಿಂತಿಲ್ಲ. ಗೋಡೌನ್ ಪ್ರಾಬ್ಲಂ ಇದೆ ಎಂದು ತಮಗೆಲ್ಲಾ ಗೊತ್ತಿದೆ. ತುಮಕೂರಿನಲ್ಲೂ ಪ್ರಾಬ್ಲಂ ಇದೆ. ಒಂದು ಕಡೆ ಪೇಮೆಂಟ್ ಪ್ರಾಬ್ಲಂ, ಇನ್ನೊಂದು ಕಡೆ ಗೋಡೌನ್ ಪ್ರಾಬ್ಲಂ ಇರುವುದರಿಂದ ಈ ಪರಿಸ್ಥಿತಿ ಬಂದಿರುವುದು. ನಾಳೆಯೇ ನಾವು ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಕರೆದು ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

(viii): ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ಎಂಡೋಸಲ್ಫಾನ್ ಸಿಂಪಡಿಸಿರುವುದರಿಂದ ಆಗಬಹುದಾದ ತೊಂದರೆಗಳು

ಡಾ। ಎ.ಬಿ. ಮಾಲಕರೆಡ್ಡಿ (ಆರೋಗ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಸದಾನಂದಗೌಡರು ಮತ್ತು ವಿಶ್ವೇಶ್ವರ ಹೆಗಡೆಯವರು ಒಂದು ಕಳವಳವನ್ನು ವ್ಯಕ್ತಮಾಡಿದರು. ನೆರೆಯ ತಾಲ್ಲೂಕಿನಲ್ಲಿ ಕೀಟ ನಾಶಕ ಔಷಧವನ್ನು ಸಿಂಪಡಣೆ ಮಾಡಿದ್ದಾರೆ. ನಮ್ಮಲ್ಲೂ ಕೂಡ ಅದನ್ನು ಉಪಯೋಗ ಮಾಡಿದರೆ ಹಾನಿಕರವಾದೀತು ಎಂದು ವ್ಯಕ್ತಮಾಡಿದರು. ಆರೋಗ್ಯ ಇಲಾಖೆಯ ಮತಿಯಿಂದ ಉಪಯೋಗ ಮಾಡುವುದು ಕೇವಲ ಮೂರೇ ಮೂರು ದ್ರಾವಣಗಳು. ಡಿಡಿಟಿ 50 ಪರ್‌ಸೆಂಟ್, ನಲಥಿಯಾನ್ ಮತ್ತು ಸಿಂಥೆಟಿಕ್ ಪೈರಥ್ರೀಯಾನ್, ಎಂಡೋಸಲ್ಫಾನ್ ಎಂಡೋಮಾಸ್ಕಿಟ್ ಕೆಮಿಕಲ್ ಅಲ್ಲ. ಅದನ್ನು ಉಪಯೋಗ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಡಿ.ಎ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ತಮ್ಮ ಇಲಾಖೆಯಿಂದ ಆದಾಗುತ್ತದೆ ಎಂದು ಹೇಳಿದ್ದಲ್ಲ. ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯಿಂದ ಎಂಡೋಸಲ್ಫಾನ್ ಸಿಂಪಡಣೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಆಗುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಇದು ಅತ್ಯಂತ ಗಂಭೀರವಾದ ವಿಚಾರ. ವಿಶೇಷವಾಗಿ ಕೃಷಿ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಎಂಡೋಸಲ್ಫಾನ್ ಸಿಂಪಡಣೆಯಿಂದಾಗಿ ಅಂಗವಿಕಲ ಮಕ್ಕಳು ಹುಟ್ಟುವಂಥದ್ದು, ಮತ್ತು ಮಕ್ಕಳು ಇದ್ದವರು ಕೂಡ ಬೇರೆ ಬೇರೆ ಖಾಯಿಲೆಗಳಿಂದ ಬಳಲುವಂಥದ್ದು, ಇಂಥದ್ದೆಲ್ಲಾ ಆಗುವುದು, ಎಲ್ಲಾ ಭಾಗದಲ್ಲೂ ನಡೆದಿದೆ. ಕೇರಳದಲ್ಲೂ ನಡೆದಿದೆ. ಕೇರಳದಲ್ಲಿ ಅದರ ವಿಚಿತ್ರವಾದ ವಿಪರ್ಯಾಸದ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ರಾಷ್ಟ್ರ ವ್ಯಾಪಿಯಾಗಿ ಬಂದಿರುವುದನ್ನು ನೋಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಈ ಭಾಗದಲ್ಲಿ ಇರುವ ಗೇರು ಮರಕ್ಕೂ ಇದನ್ನು ಸಿಂಪಡಣೆ ಮಾಡುತ್ತಾರೆನ್ನುವುದು ಈಗ ಸರ್ಕಾರದ ಗಮನಕ್ಕೆ ಬಂದಿದೆ. ಇವತ್ತಿನ ಪತ್ರಿಕೆಗಳಲ್ಲಿ ಭಾರೀ ದೊಡ್ಡದಾಗಿ ಬಂದಿದೆ. ಇಷ್ಟಲ್ಲದೆ ಕ್ಯಾಬಿನೆಟ್‌ನಿಂದಲೂ ಅದು ತೀರ್ಮಾನವಾಗಿದೆ. ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಎಂಡೋಸಲ್ಫಾನ್